**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 1092/2022**

| | | | |
|---|---|---|---|
| **ಹೆಸರು** | **:** | **ವೇಣುಗೋಪಾಲ** | **ದೋ.ಸಾ. 2** |
| **ತಂದೆಯ ಹೆಸರು** | **:** | **ಸಂಗಯ್ಯ** | **ಪ್ರಾ.ಸಾ. 2** |
| **ವಯಸ್ಸು** | **:** | **42 ವರ್ಷ** | **ದಿನಾಂಕಃ 21-03-2023** |
| **ಉದ್ಯೋಗ** | **:** | **ವ್ಯಾಪಾರ** | |
| **ವಾಸಸ್ಥಳ** | **:** | **ಕುಂಚಾವರಂ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-1 ಮತ್ತು 3 ನನಗೆ ಗೊತ್ತು.

ಈಗ ನನಗೆ ತೋರಿಸಲಾದ ದಾಖಲೆಯಲ್ಲಿರುವ ಸಹಿ ನನ್ನದೇ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು ಈಗ ನಿಪಿ-2 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿನಾಂಕ 13-08-2022 ರಂದು ನಾನು ನಮ್ಮೂರಿನಲ್ಲಿರುವ ನನ್ನ ಕಿರಾಣ ಅಂಗಡಿ ಬಳಿ ಬಂದಿದ್ದ ಪೋಲೀಸರು ಈ ಪ್ರಕರಣದ ಪಿರ್ಯಾದಿ ಚಾಸಾ-1 ರವರ ಬೈಕ ಕಳ್ಳತನ ಆದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚಾಸಾ-1 ರವರು ತೋರಿಸಿದಂತೆ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಬರೆದು ನನ್ನ ಸಹಿ ಪಡೆದಿದ್ದರು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎ.ಎಸ್.ಹೆಚ್. ವಕೀಲರಿಂದಃ**

ಈ ಪ್ರಕರಣದ ಆರೋಪಿ ಸಂತೋಷನನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎನ್ನುವುದು ಸರಿ.

ನಿಪಿ-2 ರ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ನಾನು ನಿಪಿ-2 ರ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ಪೊಲೀಸರು ಬೈಕು ಕಳ್ಳತನ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಹಜರ

ಮಾಡಿದರು ಎನ್ನುತ್ತಾರೆ. ಬೈಕನ್ನು ಯಾರು ಕಳ್ಳತನ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-2 ರ ಪಂಚನಾಮೆಯನ್ನು ಯಾವ ದಿನ ಮತ್ತು ಎಷ್ಟು ಗಂಟೆಗೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**